ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 26-06-2023 ರಂದು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್ ಎಸ್ ಎಚ್ (ಜಿ) ನ್ಯಾಯವಾದಿರವರಿಂದಃ

ನನ್ನ ತಾಯಿ ದಿಃ 07-10-2020 ರಂದು ಮೃತಪಟ್ಟಿರುತ್ತಾರೆ . ದಾವಾಸ್ತಿಗಳು ನಿ.ಡಿ-2 ರಂತೆ ನನ್ನ ತಾಯಿಯ ಹೆಸರಿನಲ್ಲಿ ಇತ್ತು ಎಂದರೆ ಸರಿ. ನನ್ನ ತಾಯಿ ಜೀವಿತಾ ಅವಧಿಯಲ್ಲಿ 2 ನೇ ಪ್ರತಿವಾದಿಯ ಹೆಸರಿನಲ್ಲಿ ಒಂದು ದಸ್ತಾವೇಜು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ . ದಿಃ 15-05-2019 ರಂದು ನನ್ನ ತಾಯಿಯು ಮೃತ್ಯುಪತ್ರವನ್ನು ಬರೆದಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮೃತ್ಯುಪತ್ರವನ್ನು ಉಪ ನೊಂದಣಾಧಿಕಾರಿಗಳ ಕಚೇರಿಯಲ್ಲಿ ನೊಂದಣಿ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಾಯಿಯು ಆರೋಗ್ಯದಿಂದ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ತಾಯಿ ಅನಾರೋಗ್ಯದಿಂದ ಇದ್ದು, ಮಾನಸಿಕವಾಗಿ ಸ್ಥಿಮಿತದಲ್ಲಿ ಇರಲಿಲ್ಲ ಮತ್ತು ಹಾಸಿಗೆಯಲ್ಲಿ ಇದ್ದರು ಎಂದು ಸಾಕ್ಷ್ಯನುಡಿಯುತ್ತಾರೆ .

ನನ್ನ ತಾಯಿಯು ಮಾನಸಿಕವಾಗಿ ಸದೃಢವಾಗಿದ್ದರು ಹಾಗೂ ಆರೋಗ್ಯದಿಂದ ಇದ್ದು, ಎಲ್ಲಾ ಆಗುಹೋಗುಗಳ ಬಗ್ಗೆ ತಿಳುವಳಿಕೆ ಇತ್ತು ಎಂದರೆ ಸರಿಯಲ್ಲ. ಉಪ ನೋಂದಣಾಧಿಕಾರಿಗಳ ಕಚೇರಿಗೆ ಖುದ್ದಾಗಿ ತೆರಳಿ, ಸಾಕ್ಷಿದಾರರುಗಳ ಸಮಕ್ಷಮ ಮರಣ ಶಾಸನವನ್ನು ನೊಂದಣಿ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಮೃತ್ಯು ಪತ್ರವನ್ನು ಮಾಡಲು ನನ್ನ ತಾಯಿಗೆ ಅಧಿಕಾರ ಇತ್ತೊ ಇಲ್ಲವೊ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿಗೆ 2 ನೇಪ್ರತಿವಾದಿಯ ಮೇಲೆ ಅತಿಯಾದ ಪ್ರೀತಿ ವಾತ್ಸಲ್ಯ ಇತ್ತು ಎಂದರೆ ಸಾಕ್ಷಿಯು ನನ್ನ ಮತ್ತು ಹಾಗೂ 2 ನೇ ಪ್ರತಿವಾದಿ ಇಬ್ಬರ ಮೇಲೆಯೂ ಇತ್ತು ಎಂದು ನುಡಿಯುತ್ತಾರೆ. ದಿಃ 19-09-2013 ರಂದು 1 ನೇ ಪ್ರತಿವಾದಿಯು ದಾವಾಸ್ತಿಗಳಲ್ಲಿ ಇರತಕ್ಕಂತಹ ತನ್ನ ಹಕ್ಕು ಹಿತಾಸಕ್ತಿಗಳನ್ನು 2 ನೇ ಪ್ರತಿವಾದಿಗೆ ನೊಂದಾಯಿತ ಹಕ್ಕು ಬಿಡುಗಡೆ ಪತ್ರದ ಮೂಲಕ ತನ್ನ ಹಕ್ಕನ್ನು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿ. ಅದಕ್ಕೆ ಪೂರಕವಾಗಿ ನಂತರ ಮರಣಶಾಸನವನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಆಕೆಯು 2 ಸಲ ಮೋಸ ಮಾಡಿ ಪತ್ರಗಳನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾಸ್ತಿಗಳಲ್ಲಿನ ತನ್ನ ಹಕ್ಕನ್ನು ಮೃತ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ನೊಂದಾಯಿತ ದಾಖಲೆಗಳ ಮೂಲಕ ಬಿಟ್ಟುಕೊಟ್ಟಿದ್ದರಿಂದ ನನಗೆ 1/3 ಹಾಗೂ 2 ನೇ ಪ್ರತಿವಾದಿಗೆ 2/3 ನೇ ಅಂಶದ ಅವಿಭಾಜ್ಯ ಹಕ್ಕು ದಾವಾ ಶೆಡ್ಯೂಲ್ ''ಎ '' ಆಸ್ತಿಗಳಲ್ಲಿ ಇರುತ್ತದೆ ಎಂದರೆ ಸರಿಯಲ್ಲ . ದಾವಾ ಶೆಡ್ಯೂಲ್ ''ಬಿ '' ಆಸ್ತಿಗಳಲ್ಲಿ 2 ನೇ ಪ್ರತಿವಾದಿಗೆ ಮಾತ್ರ ಹಕ್ಕು ಹಿತಾಸಕ್ತಿಗಳು ಇದ್ದು, ನನಗೆ ಯಾವುದೇ

ಹಕ್ಕು ಹಿತಾಸಕ್ತಿಗಳು ಸದರಿ ''ಬಿ '' ಶೆಡ್ಯೂಲ್ ಆಸ್ತಿಗಳಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ''ಎ '' ಮತ್ತು ''ಬಿ '' ಶೆಡ್ಯೂಲ್ ಆಸ್ತಿಗಳಲ್ಲಿ ಹೇಗಾದರೂ ಮಾಡಿ , ಹಕ್ಕನ್ನು ಪಡೆಯುವ ಉದ್ದೇಶದಿಂದ ನೊಂದಾಯಿತ ಹಕ್ಕು ಬಿಡುಗಡೆ ಪತ್ರ ಮತ್ತು ಮೃತ್ಯು ಪತ್ರವನ್ನು ಅಲ್ಲಗಳೆದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ .

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ .**

**ಸಿವಿಲ್ ನ್ಯಾಯಾಧೀಶರು ಕಾರವಾರ**